# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:05-03-2020ರ ನಡವಳಿಗಳು

## ವಿಷಯದ ಸಂಖ್ಯೆ: ವಾಕಾಸ್ಥಾನ/563/2019-20

ವಿಷಯ :- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ವ್ಯಾಪ್ತಿಯಲ್ಲಿ ವಾರ್ಡ್ ಸಂಖ್ಯೆ 03 & 04 ಕ್ಕೆ 2019-20ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3296 ರ ಅಡಿಯಲ್ಲಿ ಪ್ಯಾಕೇಜ್ ಕಾಮಗಾರಿಯಾದ Improvements to roads and drains at AMS layout and Judicia layout in Ward No.03 & 04 Yelahanka New Town Sub Division (Package-02) ರ ಟೆಂಡರ್ ಅನುಮೋದನೆಯ ಬಗ್ಗೆ.

ಉಲ್ಲೇಖ :- ಮಾನ್ಯ ಆಯುಕ್ತರು ರವರ ಕಛೇರಿ ಆದೇಶದ ಸಂಖ್ಯೆ:ಪಿಎಸ್(ಜಿ)/8123/2019-20, ದಿನಾಂಕ:18/02/2020

*-*-*-*-*-*

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಾಣಿಸಿದ ಯಲಹಂಕ ವಲಯದ ವ್ಯಾಪ್ತಿಯಲ್ಲಿ ಪಾಲಿಕೆಯ 2019-20ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3296 (14th Finance Commission Works – Road & Footpath Mainteancne) ಅಡಿಯಲ್ಲಿ ವಾರ್ಡ್ ಸಂಖ್ಯೆ:03 & 04 ರಲ್ಲಿನ ಪ್ಯಾಕೇಜ್ ಕಾಮಗಾರಿಯ ಅಂದಾಜು ಮೊತ್ತವಾದ ರೂ.200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿಕ್ಷಿಸಿ, ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಸದರಿ ಪ್ಯಾಕೇಜ್ ಕಾಮಗಾರಿಯಾದ Improvements to roads and drains at AMS layout and Judicia layout in Ward No.03 & 04 Yelahanka New Town Sub Division (Package-02) ರ ಟೆಂಡರ್ ಕರೆದಿದ್ದು, ದಿನಾಂಕ:13/01/2020 ರಂದು (1ನೇ ಕರೆ) ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| SL No | Name of Work | Estimated Cost (Rs in Lakhs) | Job Code |
|---|---|---|---|
| 1 | Construction of RCC drain and culverts in Judicial layout balance roads and surrounding areas in ward no.04 of Yelahanka New Town Sub Division | 100.00 | 004-20-000040 |
| 2 | Construction of RCC drain and culverts in balance roads of AMS layout and surrounding areas in ward no.03 of Yelahanka New Town Sub Division | 100.00 | 003-20-000102 |
| | **TOTAL** | **200.00** | |

1. Estimated Cost :: Rs. 200.00 Lakhs
2. Amount put to Tender :: Rs. 1,76,95,096.40
3. SR. Adopted :: 2018-19
4. Job Code :: 004-20-000040, 003-20-000102
5. Indent Number :: 39771
6. Category :: Government Works

-/-

Budget Head

8. No of Bidders :: P-3296 (14th Finance Commission Works – Road & Footpath Mainteancne)
9. Technical Evaluation Details :: 03
10. Financial Bid Details :: Approved by CE (Yelahanka) in para (18)
:: Opened On:11/02/2020

ಸದರಿ ಟೆಂಡರ್‌ನಲ್ಲಿ ಗುತ್ತಿಗೆದಾರರಾದ ಶ್ರೀ.ವೆಂಕಟೆಗೌಡ.ಜಿ ಮತ್ತು ಶ್ರೀ.ಸತೀಶ್.ಆರ್ (ಸತ್ಯ ಕನ್ಸ್‌ಟ್ರಕ್ಷನ್) ಮತ್ತು ಶ್ರೀ.ರಮೇಶ್.ವೈ.ಬಿ ರವರು ಭಾಗವಹಿಸಿದ್ದು, ಗುತ್ತಿಗೆದಾರರಾದ ಶ್ರೀ.ರಮೇಶ್.ವೈ.ಬಿ ರವರು ತಾಂತ್ರಿಕ ಬಿಡ್‌ನಲ್ಲಿ ಕೋರಲಾದ ಅರ್ಹ ದಾಖಲಾತಿಗಳನ್ನು ಸಲ್ಲಿಸದೇ ಅನರ್ಹಗೊಂಡಿರುತ್ತಾರೆ, ಉಳಿದ ಇಬ್ಬರು ಗುತ್ತಿಗೆದಾರರು ಅರ್ಹ ದಾಖಲಾತಿಗಳನ್ನು ಸಲ್ಲಿಸಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುತ್ತಾರೆ, ತಾಂತ್ರಿಕ ಬಿಡ್ ಅನ್ನು ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಅನುಮೋದಿಸಿದ್ದು, ತದನಂತರ ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ಸದರಿ ರವರ ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

| SL No | Name of Contractor | Amount put to Tender in Rs | Tendered / Bid Amount in Rs | % of Tender w.r.t PWD S.R. 2018-19 |
|---|---|---|---|---|
| 1 | ಶ್ರೀ.ವೆಂಕಟೆಗೌಡ.ಜಿ | 1,76,95,096.40 | 1,87,56,800.18 | 6.00% Above |
| 2 | ಶ್ರೀ.ಸತೀಶ್.ಆರ್ (ಸತ್ಯ ಕನ್ಸ್‌ಟ್ರಕ್ಷನ್) | | 1,91,10,701.30 | 8.00% Above |

ಸದರಿ ಟೆಂಡರ್‌ನ ಕನಿಷ್ಠ ಗುತ್ತಿಗೆದಾರರಾದ ಶ್ರೀ.ವೆಂಕಟೆಗೌಡ.ಜಿ ರವರು ಟೆಂಡರ್‌ನಲ್ಲಿ ನಮೂದಿಸಿದ ಟೆಂಡರ್ ಮೊತ್ತವಾದ ರೂ.1,87,56,800.18 ಗಳನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.1,76,95,096.40 ಗಳಿಗೆ ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ದರಪಟ್ಟಿಗೆ ಹೊಲಿಸಿದಾಗ ಶೇ.6.00% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿದ್ದು, ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚುವರಿ ಇರುವುದನ್ನು ಮುಖ್ಯ ಅಭಿಯಂತರು (ಯಲಹಂಕ ವಲಯ) ರವರು ಗಮನಿಸಿ, ದರ ಸಂಧಾನ ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಲು ಸೂಚಿಸಿದ್ದು, ಅದರಂತೆ ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರ ಕಛೇರಿಯಲ್ಲಿ ದರ ಸಂಧಾನ ನಡೆಸಿ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿದ ಟೆಂಡರ್ ಶೇಕಡವಾರುವನ್ನು ಶೇ.6.00% ರಷ್ಟು ಹೆಚ್ಚುವರಿ ದರಗಳಿಂದ ಶೇ.5.00% ರಷ್ಟು ಹೆಚ್ಚುವರಿ ದರಗಳಿಗೆ ಕಡಿಮೆ ಮಾಡಿ ಸಂಧಾನ ಪತ್ರ ನೀಡಿದ್ದು ಹಾಗೂ ಸದರಿ ಸಂಧಾನಿತ ಶೇಕಡವಾರುವಿಗೆ ಸಂಧಾನಿತ ಟೆಂಡರ್ ಮೊತ್ತವಾದ ರೂ.1,85,79,850.00 ಗಳಿಗೆ ಒಪ್ಪಿಗೆ ಪತ್ರ ನೀಡಿ ಟೆಂಡರ್ ಅನುಮೋದಿಸಲು ಕೋರಿರುತ್ತಾರೆ, ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಟೆಂಡರ್ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ, ಅಧಿಕಾರ ಪ್ರತ್ಯಾಯೋಜನೆಯಂತೆ ಅನುಮೋದಿಸುವ ಸೂಕ್ತ ಪ್ರಾಧಿಕಾರವು ಮಾನ್ಯ ಆಯುಕ್ತರು / ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ಮುಂದೆ ಇದ್ದು, ಅನುಮೋದನೆ ಕೋರಿ ಟಿಪ್ಪಣಿಯೊಂದಿಗೆ ಮಂಡಿಸಲು ಮೇಲ್ಕಂಡ ಉಲ್ಲೇಖ ರಡಿಯಲ್ಲಿ ಮಾನ್ಯ ಆಯುಕ್ತರು ರವರು ಒಪ್ಪಿಗೆ ನೀಡಿರುತ್ತಾರೆ.

| SL No | Name of Contractor | Tendered / Bid Amount in Rs | Negotiated Amount in Rs | Negotiated Rates w.r.t SR-2018-19 |
|---|---|---|---|---|
| 1 | ಶ್ರೀ.ವೆಂಕಟೆಗೌಡ.ಜಿ | 1,87,56,800.18 | 1,85,79,850.00 | 5.00% Above |

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್‌ನ ಕನಿಷ್ಠ ಗುತ್ತಿಗೆದಾರರಾದ ಶ್ರೀ.ವೆಂಕಟೆಗೌಡ.ಜಿ ರವರು ಟೆಂಡರ್‌ನಲ್ಲಿ ನಮೂದಿಸಿದ ಸಂಧಾನಿತ ಟೆಂಡರ್ ಮೊತ್ತವಾದ ರೂ.1,85,79,850.00 ಗಳನ್ನು 2018-19ನೇ ಸಾಲಿನ

ದರಪಟ್ಟಿಗೆ ಹೊಲಿಸಿದಾಗ ಶೇ.5.00% ರಷ್ಟು ಹೆಚ್ಚುವರಿ ದರಗಳ ಟೆಂಡರ್ ಅನುಮೋದನೆಗೆ ಸೂಕ್ತ ತೀರ್ಮಾನ ಕೋರಿ ಹಾಗೂ ಸದರಿ ಪ್ಯಾಕೇಜ್ ಕಾಮಗಾರಿಯ ಅಂದಾಜು ಮೊತ್ತವಾದ ರೂ.200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಘಟ್ಟನ್ನೋತ್ತರ ಅನುಮೋದನೆ ನಿರೀಕ್ಷಿಸಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಕ್ಷೇತ್ರೀ ಸಂಖ್ಯೆ:ಪಿ.ಎಸ್.ಆರ್/ಜಿ/8123/2019-20 ದಿನಾಂಕ:18/2/2020 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರವರ ಕಛೇರಿ ಸಂಖ್ಯೆ:7035/2019-20, ದಿನಾಂಕ:24-02-2020 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರವರ ದಿನಾಂಕ:25-02-2020ರ ಟಿಪ್ಪಣಿ.

ನಿರ್ಣಯ: ಪ್ರಧಾನ ಅಭಿಯಂತರವರ ದಿನಾಂಕ: 25-02-2020ರ ಟಿಪ್ಪಣಿಯನ್ನು ಒಪ್ಪಿತ ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| ಕ್ರ. ಸಂ | ಶ್ರೀಯುತರ ಹೆಸರು | ಪದನಾಮ | ನಿರ್ಣಯದ ಪರವಾಗಿ ಸಹಿ |
|---|---|---|---|
| 1 | ಜಿ.ಕೆ.ವೆಂಕಟೇಶ್ (ಎನ್.ಟಿ.ಆರ್) | ಅಧ್ಯಕ್ಷರು | |
| 2 | ಎನ್.ಶಾಂತಕುಮಾರಿ | ಸದಸ್ಯರು | |
| 3 | ಗುರುಮೂರ್ತಿ ರೆಡ್ಡಿ | ಸದಸ್ಯರು | |
| 4 | ಮಹದೇವ.ಎಂ. | ಸದಸ್ಯರು | |
| 5 | ಗಾಯಿತ್ರಿ.ಎಂ. | ಸದಸ್ಯರು | |
| 6 | ಐಶ್ವರ್ಯ.ಬಿ.ಎನ್. | ಸದಸ್ಯರು | Aishwarya. |
| 7 | ಮಂಜುಳ ವಿಜಯಕುಮಾರ್ | ಸದಸ್ಯರು | |
| 8 | ರಾಧಮ್ಮ ವೆಂಕಟೇಶ್ | ಸದಸ್ಯರು | |
| 9 | ನೌಶೀರ್ ಅಹ್ಮದ್ | ಸದಸ್ಯರು | |
| 10 | ನಳಿನಿ.ಎಂ.ಮಂಜು | ಸದಸ್ಯರು | Nalini.m.manju |
| 11 | ಸವಿತ.ವಿ.ಕೃಷ್ಣ | ಸದಸ್ಯರು | Savitha.M |